# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ. ಎ. ತಿಪ್ಪೇಸ್ವಾಮಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 950**

**ಉತ್ತರಿಸಬೇಕಾದ ದಿನಾಂಕ : 27.12.2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಬ್ಯಾಂಕ್ ಮತ್ತು ಸೊಸೈಟಿ ಸೇರಿದಂತೆ ಬ್ಯಾಂಕುಗಳಲ್ಲಿ ಠೇವಣಿ ಹೂಡಿರುವ ಠೇವಣಿದಾರರ ಹಿತರಕ್ಷಣೆ ಕಾಪಾಡಲು ಸರ್ಕಾರ ತಂದಿರುವ ಕಾನೂನುಗಳು ಯಾವುವು; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಸಹಕಾರ ಬ್ಯಾಂಕ್ ಮತ್ತು ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಆಡಳಿತ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ಸದಸ್ಯರ ಠೇವಣಿಯ ರಕ್ಷಣೆ ಜವಾಬ್ದಾರಿ ಹೊಂದಿರುತ್ತಾರೆ. ಪಟ್ಟಣ ಸಹಕಾರ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳನ್ವಯವು ಸಹ ಕಾರ್ಯ ನಿರ್ವಹಿಸುತ್ತಿವೆ<br><br>ಸಂಘಗಳ ಆಡಳಿತ ಜವಾಬ್ದಾರಿಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ-1959ರ ಕಲಂ 28ಎ, 28ಸಿ ಮತ್ತು 29ಜಿ ರಲ್ಲಿ ನಿಗದಿಗೊಳಿಸಲಾಗಿದೆ. ನಿಗದಿಗೊಳಿಸಿದ ಜವಾಬ್ದಾರಿಗಳನ್ನು ನಿರ್ವಹಿಸಲು ವಿಫಲರಾದ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳ ವಿರುದ್ಧ ಕಾಯ್ದೆ ಕಲಂ 63 ರಂತೆ ಲೆಕ್ಕಪರಿಶೋಧನೆ ಅಥವಾ ಕಲಂ 64 ರಂತೆ ವಿಚಾರಣೆಗೆ ಅಥವಾ ಕಲಂ 65 ರಂತೆ ಪರಿವೀಕ್ಷಣೆಗೆ ಒಳಪಡಿಸಿ ನಂತರ ಕ್ರಮ ಕೈಗೊಳ್ಳಲು ಕಾಯ್ದೆ ಕಲಂ-29ಸಿ, 69, 70 ಮತ್ತು 103 ರ ಅವಕಾಶಗಳ ರೀತ್ಯಾ ಕ್ರಮ ಕೈಗೊಳ್ಳಲು ಇಲಾಖಾಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ.<br><br>ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ, ಬ್ಯಾಂಕುಗಳು ಸಂಗ್ರಹಿಸಿದ ಠೇವಣಿ ಮೊತ್ತದ ಮೇಲೆ ಪ್ರತೀ ವರ್ಷರೂ. 100-00 ಗಳಿಗೆ 12 ಪೈಸೆಗಳಷ್ಟನ್ನು ಡಿಐಸಿಜಿಸಿ, ಮುಂಬೈ (Deposit Insurance and Credit Gaurantee Corporation, Mumbai) ಈ ಸಂಸ್ಥೆಯಲ್ಲಿ ತೊಡಗಿಸಬೇಕಾಗಿರುತ್ತದೆ. ಒಂದು ವೇಳೆ ಸದಸ್ಯರ ಠೇವಣಿ ಪಾವತಿಸುವ ಸಂದರ್ಭದಲ್ಲಿ ತೊಂದರೆಗಳುಂಟಾದರೆ ಸದರಿ ಸಂಸ್ಥೆಯು ಕನಿಷ್ಠ ರೂ.5.00 ಲಕ್ಷಗಳವರೆಗೆ ಒಬ್ಬ ಠೇವಣಿದಾರನಿಗೆ ಪರಿಹಾರ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಆ) | ರಾಜ್ಯದಲ್ಲಿ ಇದುವರೆಗೂ ಠೇವಣಿ ಸಂಗ್ರಹಿಸಿ, ಠೇವಣಿ ಮೊತ್ತವನ್ನು ದುರುಪಯೋಗ ಮಾಡಿಕೊಂಡಿರುವ ಹಣಕಾಸು ಸಂಸ್ಥೆಗಳು ಯಾವುವು ಮತ್ತು ಈ ಸಂಸ್ಥೆಗಳ ಮೇಲೆ ಇದುವರೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಇದುವರೆಗೂ ಠೇವಣಿ ಸಂಗ್ರಹಿಸಿ ಠೇವಣಿ ಮೊತ್ತವನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಸಂಘವಾರು ವಿವರಗಳನ್ನು ಹಾಗೂ ಇವುಗಳ ಮೇಲೆ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧದಲ್ಲಿ ಸಲ್ಲಿಸಿದೆ**. |
| ಇ) | ರಾಜ್ಯದಲ್ಲಿರುವ ಠೇವಣಿದಾರರ ಹಿತ ಕಾಪಾಡಲು ಮತ್ತು ಠೇವಣಿದಾರರ ಠೇವಣಿ ಹಿಂದಿರುಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಯೋಜನೆಗಳು ಮತ್ತು ಭದ್ರತೆಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಠೇವಣಿದಾರರ ಹಿತ ಕಾಪಾಡಲು ಬ್ಯಾಂಕುಗಳು ಸಂಗ್ರಹಿಸಿದ ಠೇವಣಿ ಮೊತ್ತದ ಮೇಲೆ ಪ್ರತೀ ವರ್ಷರೂ. 100-00 ಗಳಿಗೆ 12 ಪೈಸೆಗಳಷ್ಟನ್ನು ಡಿಐಸಿಜಿಸಿ, ಮುಂಬೈ (Deposit Insurance and Credit Gaurantee Corporation, Mumbai) ಈ ಸಂಸ್ಥೆಯಲ್ಲಿ ತೊಡಗಿಸಬೇಕಾಗಿರುತ್ತದೆ. ಒಂದು ವೇಳೆ ಸದಸ್ಯರ ಠೇವಣಿ ಪಾವತಿಸುವ ಸಂದರ್ಭದಲ್ಲಿ ತೊಂದರೆಗಳುಂಟಾದರೆ ಸದರಿ ಸಂಸ್ಥೆಯು ಕನಿಷ್ಠ ರೂ.5.00 ಲಕ್ಷಗಳವರೆಗೆ ಒಬ್ಬ ಠೇವಣಿದಾರನಿಗೆ ಪರಿಹಾರ ಒದಗಿಸಲು ಅವಕಾಶ ಕಲ್ಪಿಸಲಾಗಿದೆ<br><br>ಹಾಗೂ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ 2004ರಡಿ ಹಣಕಾಸು ಸಂಸ್ಥೆಗಳ ವಿರುದ್ಧ ಸಂಸ್ಥೆಯ ಹಾಗೂ ಸಂಸ್ಥೆಯ ಪಾಲುದಾರರ ಆಸ್ತಿ ಹರಾಜು ಮಾಡಿ ಠೇವಣಿ ಮರಳಿಸಲು ಅವಕಾಶವಿದ್ದು, ಅದೇ ರೀತಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲು ಅವಕಾಶವಿದೆ. |

**ಸಂಖ್ಯೆ: ಸಿಒ 245 ಸಿಸಿಬಿ 2022**

**(ಎಸ್.ಟಿ.ಸೋಮಶೇಖರ್)**
**ಸಹಕಾರ ಸಚಿವರು**

ಅನುಬಂಧ

ಪ್ರಶ್ನೆ

| ಕ್ರ. ಸಂ. | ಜಿಲ್ಲೆಯ ಹೆಸರು | ಸಹಕಾರ ಸಂಘ/ಬ್ಯಾಂಕ್ ಹೆಸರು ಮತ್ತು ವಿಳಾಸ | ಠೇವಣಿ ದುರುಪಯೋಗಪಡಿಸಿಕೊಂಡಿರುವ ಪ್ರಕರಣಗಳು (ರೂ.ಲಕ್ಷಗಳಲ್ಲಿ) | | ಕೈಗೊಂಡಿರುವ ಕ್ರಮಗಳು |
|---|---|---|---|---|---|
| | | | ಸಂಖ್ಯೆ | ಮೊತ್ತ | |
| 1 | 2 | 3 | 4 | 5 | |
| 1 | ಡಿಆರ್‌ಸಿಎಸ್-1 | ಸಹಕಾರ ನಗರ ಪತ್ತಿನ ಸಹಕಾರ ಸಂಘ ನಿ., ನಂ.415/3, ಎಫ್ ಬ್ಲಾಕ್, ಸಹಕಾರ ನಗರ, ಬೆಂಗಳೂರು | 1 | 202.51 | 1)ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮ್ಮೆ ಸಂಖ್ಯೆ:0321/2012 ದಿನಾಂಕ:17-11-2012ರ ಪ್ರಕಾರ ಕ್ರಮಕೈಗೊಳ್ಳಲು ಹಾಗೂ ದುರುಪಯೋಗ ಆಗಿರುವ ಹಣವನ್ನು ವಸೂಲಿ ಮಾಡಿಕೊಡುವಂತೆ ದೂರು ಸಲ್ಲಿಸಲಾಗಿದೆ. ದುರುಪಯೋಗ ಮಾಡಿರುವ ಸಿಬ್ಬಂದಿಯು ನೀಡಿರುವ ಚೆಕ್‌ಗಳನ್ನು ಬ್ಯಾಂಕಿಗೆ ಜಮಾ ಮಾಡಿ ಬ್ಯಾಂಕಿನಲ್ಲಿ ಹಣವಿಲ್ಲದೇ ವಾಪಸ್ ಬಂದ ಕಾರಣ ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮ್ಮೆ ಸಂಖ್ಯೆ:20823/2012 12ನೇ ಎಸಿಎಂ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ವಿಚಾರಣೆಯು ನಡೆಯುತ್ತಿದೆ.<br><br>2)4ನೇ ಎ.ಸಿ.ಎಂ.ಎಂ. ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಸಿ.ಸಿ. ನಂ. 1986/2013, 30-01-2013 ರಲ್ಲಿ ಪ್ರಕರಣ ದಾಖಲಾಗಿಸಿ, ಹಣ ದುರುಪಯೋಗ ಮಾಡಿರುವ ಸಿಬ್ಬಂದಿಯ ವಿರುದ್ಧ ಕ್ರಿಮಿನಲ್ ಮೊಕದ್ದಮ್ಮೆಯನ್ನು ದಾಖಲಿಸಿದ್ದು, ದಾಖಲೆ ಪರಿಶೀಲನೆ ಹಂತದಲ್ಲಿದೆ.<br><br>3)ಜೆಆರ್‌ಬಿ/ಡಿಐಎಸ್/98/2012-13 ದಿ:17-04-2013 ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದು, ವಿಚಾರಣೆಯು ನಡೆಯುತ್ತಿದೆ. |
| 2 | ಡಿಆರ್‌ಸಿಎಸ್-2 | ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ., | 41778 | 240217 | 1. ,ಸದರಿ ಬ್ಯಾಂಕಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ-1959ರ ಪ್ರಕರಣ 30(6)ರಡಿ ಆಡಳಿತಾಧಿಕಾರಿಯನ್ನು ನೇಮಿಸಲಾಗಿದ್ದುತ್ತದೆ. ಸಿಐಡಿ ತನಿಖೆ ಆದೇಶಿಸಲಾಗಿದೆ, 2. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ-1959ರ ಪ್ರಕರಣ ಕಲಂ 64 ರಡಿ ವಿಚಾರಣೆ ನಡೆಸಲಾಗಿದೆ.3. 2014-15 ರಿಂದ 2018-19 ರವರೆಗಿನ ಲೆಕ್ಕಪತ್ರಗಳನ್ನುಮರು ಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ4. ಜಾರಿ ನಿರ್ದೇಶನಾಲಯ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿರುತ್ತದೆ.5. ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ 6.ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.. |
| | ಡಿಆರ್‌ಸಿಎಸ್-4 | ಐಎಂಎ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಶಿವಾಜಿನಗರ, ಬೆಂಗಳೂರು | - | 8700.00 | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64 ರ ವಿಚಾರಣಾ ಸಮಯದಲ್ಲಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಸಂಘದ ಆಡಳಿತ ಮಂಡಲಿ ವಿರುದ್ಧ ಕಲಂ 29-ಸಿ ಅನ್ವಯ ಕ್ರಮವಿಡಲಾಗಿದೆ ಹಾಗೂ ಸಂಘದ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ನಿರ್ದೇಶಕರ ವಿರುದ್ಧ ಕಲಂ 69 ರಡಿ ಅಧಿಭಾರ ಪ್ರಕರಣವನ್ನು ದಾಖಲಿಸಲಾಗಿದೆ ಹಾಗೂ ಸದರಿ ಪ್ರಕರಣವನ್ನು ಸರ್ಕಾರವು ಹೆಚ್ಚಿನ ತನಿಖೆಗಾಗಿ ಸಿ.ಬಿ.ಐ. ತನಿಖೆಗೆ ಒಳಪಡಿಸಲಾಗಿದೆ. ಪ್ರಕರಣವು ತನಿಖಾ ಹಂತದಲ್ಲಿರುತ್ತದೆ. ಸದರಿಯವರ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. |
| | ಶಿವಮೊಗ್ಗ | ಬನಸಿರಿ ಮಹಿಳಾ ಪತ್ತಿನ ಸಹಕಾರ ಸಂಘ ನಿ., ಶಿಕಾರಿಪುರ | 1 | 6.58 | ಕ್ರಿಮಿನಲ್ ಕೇಸ್ ದಾಖಲಾಗಿದ್ದು ಕ್ರಮ ಬಾಕಿ ಇರುತ್ತದೆ. |
| 3 | | ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘ ನಿ., ಶಿಕಾರಿಪುರ | 3 | 43.50 | ಸಿವಿಲ್ ಹಾಗೂ ಕ್ರಿಮಿನಲ್ ಕ್ರಮಕೈಗೊಂಡಿರುತ್ತದೆ. |

| | | | | | |
|---|---|---|---|---|---|
| 4 | ಮೈಸೂರು | ಮೈಸೂರು ನಗರ ಮಹಿಳಾ ಪತ್ತಿನ ಸಹಕಾರ ಸಂಘ ನಿ. ಮೈಸೂರು | 190 | 1503.4 | ಠೇವಣಿ ಮೊತ್ತವನ್ನು ದುರುಪಯೋಗ ಮಾಡಿಕೊಂಡಿರುವ ಸಂಬಂಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64 ರಡಿ ವಿಚಾರಣೆ ಜರುಗಿದ್ದು, ವರದಿ ಬರಲು ಬಾಕಿ ಇರುತ್ತದೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 70ರಡಿ 108 ಪ್ರಕರಣಗಳು ದಾಖಲಾಗಿದ್ದು, 78 ಪ್ರಕರಣಗಳು ಇತ್ಯರ್ಥವಾಗಿದ್ದು, 30 ಪ್ರಕರಣಗಳು ಆದೇಶಕ್ಕೆ ಬಾಕಿ ಇರುತ್ತದೆ. ಮುಂದುವರೆದು ಈ ಪ್ರಕರಣದ ಎದುರುದಾರರುಗಳ ಸ್ಥಿರಾಸ್ತಿಯನ್ನು ಅಧಿನಿಯಮ ಪ್ರಕರಣ 103ರಡಿ ಮುಟ್ಟುಗೋಲು ಮಾಡಿಕೊಳ್ಳಲಾಗಿರುತ್ತದೆ. |
| 5 | ಬೆಳಗಾವಿ | ಅಥಣಿ ಮಹಿಳಾ ಕೋ-ಆಪ್ ಕ್ರೆಡಿಟ ಸೊಸೈಟಿ ನಿ., ಅಥಣಿ | 1200 | 2100.00 | ಠೇವಣಿದಾರ ಠೇವು ಹಣ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರಡಿ ವಿಚಾರಣೆ ಜರುಗಿಸಲು ಕ್ರ ಎಆರ್-11/ಆರ್ಎಸ್ಆರ್/139/18-19 ದಿನಾಂಕ 07-12-2018 ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿಆದೇಶ ಹೊರಡಿಸಲಾಗಿದೆ. ವಿಚಾರಣಾಧಿಕಾರಿಗಳ ವರದಿ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 68 ರಡಿ ಕ್ರ ಎಆರ್-11/ಆರ್ಎಸ್ಆರ್/139/18-19 ದಿನಾಂಕ 08-02-2022 ರಂದು ಆದೇಶ ಹೊರಡಿಸಲಾಗಿದೆ. ಸಹಾಯಕ ನಿಬಂಧಕರು, ಚಿಕ್ಕೋಡಿ ಇವರು ಸದರಿ ಸಂಘದ ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿಯ ಸದಸ್ಯರ ವಿರುದ್ದ ಸಿವ್ಹಿಲ್ ಕ್ರಮ ಹಾಗೂ ಕ್ರಿಮಿನಲ್ಲ ಕ್ರಮ ಜರುಗಿಸಲು ಸಹಕಾರ ಅಭಿವೃದ್ಧಿ ಅಧಿಕಾರಿ ಅಥಣಿ ಇವರಿಗೆ ದಿ:20/09/2022 ರಂದು ಅಧಿಕಾರ ನೀಡಿದ್ದಾರೆ. ಸದರಿ ನೀಡಲಾದ ಅಧಿಕಾರಿದ ವಿರುದ್ಧ ಸಂಘದವರು ಉಪ ನಿಬಂಧಕರ ಕಛೇರಿ, ಬೆಳಗಾವಿಯಲ್ಲಿ ಮೇಲ್ಮನವಿ ದಾಖಲಿಸಿದ್ದು ಸದರಿ ಮೇಲ್ಮನವಿಯಲ್ಲಿ ದಿ:25/11/2022 ರಂದು ಸಹಾಯಕ ನಿಬಂಧಕರ.ಕ್ರಮಕ್ಕೆ ತಡಯಾಜ್ಞೆ ನೀಡಲಾಗಿದೆ. ವಿಚಾರಣಾ ಹಂತವು ಎದುರುದಾರರ ಆಕ್ಷೇಪಣೆ ಹೇಳಿಕೆ ಸಲ್ಲಿಸಲು ಇರುತ್ತದೆ. |
| 6 | | ಕರ್ನಾಟಕ ಕೋ-ಆಪ್ ಕ್ರೆಡಿಟ ಸೊಸೈಟಿ ನಿ., ಅಥಣಿ | 17617 | 1417.00 | ಠೇವಣಿದಾರ ಠೇವು ಹಣ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 65 ರಡಿ ಪರೀವಿಕ್ಷಣೆ ಜರುಗಿಸಲು ಡಿಆರ್.ಎಲ್/ಎಂಕೆಟಿ/ಇಎನ್.ಕ್ಯೂ/12/19-20 ದಿನಾಂಕ31-12-2021 ರಂದು ಪರಿವಿಕ್ಷಣಾಧಿಕಾರಿಯನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.ಪರೀವಿಕ್ಷಣಾಧಿಕಾರಿಗಳ ವರದಿ ಮೇರೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 68 ರಡಿ ಡಿಆರ್.ಎಲ್/ಎಂಕೆಟಿ/ಇಎನ್.ಕ್ಯೂ/12/19-20 ದಿನಾಂಕ: 30-01-2021 ರಂದು ಆದೇಶ ಹೊರಡಿಸಲಾಗಿದೆ. ತದನಂತರ ತಪ್ಪಿತಸ್ತರ ವಿರುದ್ಧ ಸಿವಿಲ ಹಾಗೂ ಕ್ರೀಮಿನಲ್ ಕ್ರಮ ಜರುಗಿಸಲು ಕ್ರ:ಡಿಆರ್.ಎಲ್/ಎಬಿಎನ್/10/2021-22 ದಿನಾಂಕ 01-09-2021 ರನ್ವಯ ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿಯ ಸದಸ್ಯರ ವಿರುದ್ದ ಕ್ರೀಮಿನಲ್ ಕ್ರಮ ಜರುಗಿಸಲು ಸಹಕಾರ ಅಭಿವೃದ್ಧಿ ಅಧಿಕಾರಿ ಅಥಣಿ ಇವರಿಗೆ ಅಧಿಕಾರ ನೀಡಲಾಗಿದೆ. ಮುಂದುವರೆದು ದಿ:25/08/2021 ರಂದು ಅಥಣಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ಸಂಖ್ಯೆ 346/2021 ದಾಖಲಾಗಿದ್ದು ಇರುತ್ತದೆ. |

| | | | | | |
|---|---|---|---|---|---|
| | ಬೆಳಗಾವಿ | ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿ., ಬೆಳಗಾವಿ | 61357 | 28114 | ಸದರಿ ಸಹಕಾರ ಸಂಘವು ಸೌಹಾರ್ದ ಕಾಯ್ದೆಗೆ ದಿನಾಂಕ 18-05-2005 ರಂದು ನೋಂದಣಿ ಕ್ರ ಸಂ : ಡಿಆರ್‌ಎಲ್/ಆರ್‌ಎಸ್‌ಆರ್/ಸೌಕಾ/ನೋಂ/1202/2005-06 ರನ್ವಯ ಪರಿವರ್ತನೆಗೊಂಡಿರುತ್ತದೆ. ಸಂಘವು ಸೌಹಾರ್ದ ಕಾಯ್ದೆಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆನೋಂದಣಿ ಸಂಖ್ಯೆ: ತದನಂತರ ಸದರಿ ಡಿಆರ್‌ಎಲ್/ಆರ್‌ಎಸ್‌ಆರ್/ಯುಬಿಜಿ/43110/2012-13 ದಿ: 26-07-2012 ರಂದು ಪರಿವರ್ತನೆಗೊಂಡಿರುತ್ತದೆ. ಈ ಸಂಘದ ಕಾರ್ಯಕ್ಷೇತ್ರವು ಪ್ರಾಂತೀಯಮಟ್ಟದ್ದಾಗಿದ್ದು, ಸದರ ಸಹಕಾರ ಸಂಘದ ಉಪನಿಯಮ ತಿದ್ದುಪಡಿಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಕೇಂದ್ರ ಕಚೇರಿ ಬೆಂಗಳೂರು ಇವರು ಅನುಮೋದಿಸಿರುತ್ತಾರೆ. ದಿನಾಂಕ:31-03-2017 ಕ್ಕೆ ಇದ್ದಂತೆ ಸಂಘದಿಂದ ವಿವಿಧ ಪ್ರಕಾರದ ಠೇವಣಿಗಳನ್ನು ಸ್ವೀಕರಿಸಿದ್ದು 61,357 ಖಾತೆಗಳಿಂದ ರೂ.281,14,54,330/- (ರೂ. 281.14 ಕೋಟಿ) ಗಳಷ್ಟು ಮೊತ್ತವನ್ನು ಠೇವಣಿ ರೂಪದಲ್ಲಿ ಸಂಗ್ರಹಿಸಲಾಗಿರುತ್ತದೆ. ಒಟ್ಟು ಸಂಗ್ರಹಿಸಿದ ರೂ.281.14 ಕೋಟಿ ವಿವಿಧ ನಮೂನೆಯ ಠೇವಣಿ ಮೊತ್ತದಲ್ಲಿ ರೂ. 275.54 ಕೋಟಿಗಳ ಮೊತ್ತವನ್ನು ವೈಯಕ್ತಿಕ ಬೇನಾಮಿ ಸಾಲದಲ್ಲಿ ವಿನಿಯೋಗಿಸಿದ್ದರಿಂದ ಠೇವಣಿದಾರರಿಂದ ಠೇವಣಿ ಮೊತ್ತವನ್ನು ಬೇಡಿಕೆಗೆ ಅನುಸಾರವಾಗಿ ಮರುಪಾವತಿಸಲು ಸಂಘದಿಂದ ಆಗಿರುವುದಿಲ್ಲ. ಠೇವಣಿದಾರರ ಠೇವಣಿ ಮೊತ್ತವನ್ನು ಮರುಪಾವತಿ ಮಾಡದೇ ಇರುವ ಕಾರಣಕ್ಕಾಗಿ ಸದರ ಸಹಕಾರ ಸಂಘದ ಆಡಳಿತ ಮಂಡಲಿ ಸದಸ್ಯರ/ಕಾರ್ಯದರ್ಶಿ/ಸಹಕಾರ್ಯದರ್ಶಿ/ ಶಾಖಾವ್ಯವಸ್ಥಾಪಕರ ವಿರುದ್ಧ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಳಗಾವಿ ಇವರ ನಿರ್ದೇಶನದ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬೆಳಗಾವಿ ಇವರು ಬೆಳಗಾವಿ ನಗರ ಅಪರಾಧ ಪೋಲಿಸ ಠಾಣೆ ಬೆಳಗಾವಿ ಇಲ್ಲಿ ಅಪರಾಧ ಸಂಖ್ಯೆ 185/17 ದಿನಾಂಕ: 01-09-2017 ರಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ. ದಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣಾ ಅರ್ಬನ್ ಕೋ ಆಪ್‌ರೇಟಿವ ಕ್ರೆಡಿಟ್ ಸೊಸೈಟಿ ನಿ., ಬೆಳಗಾವಿ ಇದರಲ್ಲಿ ನಡೆದಿದೆ ಎನ್ನಲಾದ ವ್ಯವಹಾರಗಳ ಕುರಿತು ಶಾಸನ ಬದ್ಧ ವಿಚಾರಣೆ ಜರುಗಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ ಇವರು ಆದೇಶ ಸಂಖ್ಯೆ ಕ್ರ:ಯುಬಿಸಿ-1/218/ವಿಚಾರಣೆ/2017-18. ದಿ:10-09-2018 ರಡಿ ಸಹಕಾರ ಸಂಘಗಳ ಉಪ ನಿಬಂಧಕರು ಬೆಳಗಾವಿ ಇವರನ್ನು ವಿಚಾರಣಾಧಿಕಾರಿಗಳೆಂದು ನೇಮಕ ಮಾಡಿರುತ್ತಾರೆ. ಏತನ್ಮಧ್ಯೆ ಅಪರಾಧ ಸಂಖ್ಯೆ 185/2017 ರಲ್ಲಿ ಪಿಎಫ್ ನಂ. 64/17 ದಿನಾಂಕ: 20-09-2017, 65/17 ದಿನಾಂಕ: 21-09-2017, ಮತ್ತು 66/17, ದಿನಾಂಕ: 22-09-2017 ರಲ್ಲಿಯ ದಾಖಲೆಗಳ ಪ್ರಮಾಣಿಕೃತ ಪ್ರತಿಗಳನ್ನು ಪೂರೈಸಬೇಕೆಂದು ಕೋರಿ ದಿನಾಂಕ: 31-10-2017 ರಂದು ಆರಕ್ಷಕ ನಿರೀಕ್ಷಕರು ನಗರ ಅಪರಾಧ ಪೋಲಿಸ ಠಾಣೆ ಬೆಳಗಾವಿ ಇವರಿಗೆ ವಿನಂತಿಸಿದ ಮೇರೆಗೆ ದಿನಾಂಕ:03-01-2018, 04-01-2018, 05-01-2018, ಹಾಗೂ ದಿ:06-01-2018 ರಂದು ಪೋಲಿಸ್ ಇಲಾಖೆಯವರು ದಾಖಲೆಗಳನ್ನು ಪೂರೈಸಿರುತ್ತಾರೆ. ಪೋಲಿಸ್ ಇಲಾಖೆಯಿಂದ ಪಡೆದುಕೊಂಡ ದಾಖಲೆಗಳನ್ನು ಪರಿಶೀಲಿಸಲಾಗಿ ಸಂಘದ ಅಧ್ಯಕ್ಷರಾದ ಶ್ರೀ ಆನಂದ ಅಪ್ಪುಗೋಳ ಹಾಗೂ ಅವರ ಪತ್ನಿ ಮತ್ತು ಇನ್ನಿತರ ಆಡಳಿತ ಮಂಡಲಿಯ ನಿರ್ದೇಶಕರ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿದ್ದು ಕಂಡು ಬಂದಿದ್ದರಿಂದ ಆಸ್ತಿ ಖರೀದಿಸಿದ ಆಸ್ತಿದಾರರಿಗೆ ವಿಚಾರಣೆಗಾಗಿ ಸಮನ್ಸ್ ಜಾರಿ ಮಾಡಲಾಗಿದೆ. ಆದರೆ ಯಾವುದೇ ಆಸ್ತಿದಾರರು ಯಾವುದೇ ಹೇಳಿಕೆ ಹಾಗೂ ವಿಚಾರಣೆಗೆ ಹಾಜರಾಗಿರುವುದಿಲ್ಲ. ಆಸ್ತಿ |
| 7 | | | | | ದಿ:07/03/2019 ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಬೆಂಗಳೂರು ಇವರ ನ್ಯಾಯಾಲಯದಲ್ಲಿ ತಪ್ಪತಸ್ಥರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 69 ರಡಿಯಲ್ಲಿ ಅಧಿಭಾರ ಪ್ರಕರಣ ಯುಬಿಸಿ-3/ಅದಿಭಾರ/181/20185-19 ಅನ್ನು ದಾಖಲಿಸಿದ್ದು ಅದರ ಜೊತೆಗೆ ಕಲಂ 103 ರಡಿ ಅರ್ಜಿಯನ್ನು ದಾಖಲು ಮಾಡಿ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಸಿಬ್ಬಂದಿಗಳ ಆಸ್ತಿಯ ಮೇಲೆ ಮುಟ್ಟುಗೋಲು ಆದೇಶವನ್ನು ಹೋರಡಿಸಬೇಕೆಂದು ಕೋರಿಕೊಂಡಿದ್ದು ಆ ಮೇರೆಗೆ ಮಾನ್ಯ ನ್ಯಾಯಾಲಯವು ದಿ:19/03/2019 ರ ಆದೇಶದ ಮೇರೆಗೆ ಕಲಂ 103 ರಡಿ ಜಪ್ತಿ ಪೂರ್ವ ಆದೇಶ ನೋಟಿಸನ್ನು ಜಾರಿ ಮಾಡಿರುತ್ತದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬೆಂಗಳೂರು ಇವರು ಕೆ.ಪಿ.ಐ.ಡಿ.ಇ.ಎಫ್ ಕಾಯ್ದೆ ರಡಿ ಅವರ ಆದೇಶ ಕ್ರ:ಆರಡಿ4/ಜಿಆರ್ಸಿ/2019-20 (ಪಿ) ದಿ:25/06/2019 ರ ಆದೇಶದ ಮೇರೆಗೆ ಉಪ ವಿಭಾಗಾಧಿಕಾರಿಗಳು ಬೆಳಗಾವಿ ಇವರನ್ನು ಸಕ್ಷಮ ಪ್ರಾಧಿಕಾರಿಎಂದು ನೇಮಕ ಮಾಡಿದ್ದು ಇರುತ್ತದೆ. ಸದರಿಯವರ ಆದೇಶ ಕ್ರ:ಆರಡಿ4/ಜಿಆರ್ಸಿ/2019-20 (ಪಿ) ದಿ:25/06/2019 ಆದೇಶದ ಮೇರೆಗೆ ಸಂಘದ ಅಧ್ಯಕ್ಷರ ಹಾಗೂ ನಿರ್ದೇಶಕರ ಹೆಸರಿನಲ್ಲಿರುವ 47 ಆಸ್ತಿಗಳ ಮೇಲೆ ಮುಟ್ಟುಗೋಲು ಆದೇಶವನ್ನು ಹೊರಡಿಸಿದ್ದು ಈ ಆದೇಶವು ದಿ:27/06/2019 ರ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗಿರುತ್ತದೆ. ಉಪವಿಭಾಗಾಧಿಕಾರಿಗಳು ಬೆಳಗಾವಿ ಇವರು ಸಂಘದ ಅಧ್ಯಕ್ಷರ ಹಾಗೂ ನಿರ್ದೇಶಕರ ಹೆಸರಿನಲ್ಲಿರುವ ಆಸ್ತಿಗಳನ್ನು ವಿಲೆವಾರಿ ಮಾಡಲು ಕ್ರಮವನ್ನು ಇಟ್ಟಿರುತ್ತಾರೆ. ಸಂಘದ ಅವ್ಯವಹಾರಗಳ ಬಗ್ಗೆ ಇಲಾಖೆಯು ಕೈಕೊಂಡ ಕ್ರಮಗಳ ಬಗ್ಗೆ ದಿ:23/06/2020 ರಂದು ಸಹಾಯಕ ನಿರ್ದೇಶಕರು ಜಾರಿ ನಿರ್ದೇಶನಾಲಯ ಬೆಂಗಳೂರು ಇವರಿಗೆ ವಿವರವಾದ ವರದಿಯನ್ನು ಅಗತ್ಯ ದಾಖಲೆಯೊಂದಿಗೆ ಸಲ್ಲಿಸಲಾಗಿರುತ್ತದೆ. ಮುಂದುವರೆದು ಸಹಾಯಕ ನಿರ್ದೇಶಕರು ಜಾರಿ ನಿರ್ದೇಶನಾಲಯ ಬೆಂಗಳೂರು ಸಂಘದ ಹಣಕಾಸಿನ ವ್ಯವಹಾರಗಳ ಕುರಿತು ಬೆಳಗಾವಿಗೆ ಬಂದು ವಿಚಾರಣೆಯನ್ನು ಜರುಗಿಸಿರುತ್ತಾರೆ. ಸಂಘದ ವ್ಯವಹಾರಗಳ ಕುರಿತು ಸಿ.ಐ.ಡಿ ಬೆಂಗಳೂರು ಇವರು ತನಿಖೆಯನ್ನು ಜರುಗಿಸುತ್ತಿದ್ದಾರೆ. |

| | | | | | |
|---|---|---|---|---|---|
| 8 | ವಿಜಯಪುರ | ದಿ ಡೆಕ್ಕನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ವಿಜಯಪುರ | 5975 | 75.80 | [illegible] ಒಟ್ಟು ಠೇವಣಿ ಮೊತ್ತ 1814.10 ಲಕ್ಷಗಳ ಪೈಕಿ 1763 ಠೇವಣಿದಾರರಿಗೆ 1311.23 ಠೇವಣಿ ಹಣವನ್ನು ಈಗಾಗಲೆ ಮರುಪಾವತಿಸಲಾಗಿದೆ. ಬಾಕಿ ಉಳಿದ 5975 ಠೇವಣಿದಾರರಿಗೆ ಠೇವಣಿ ಮೊತ್ತ 75.80 ಹಣವನ್ನು ಪಾವತಿಸುವ ಸಲುವಾಗಿ ಡಿ.ಐ.ಜಿ.ಸಿ ಆರ್.ಬಿ.ಆಯ್ ಕಛೇರಿ ಮುಂಬೈಯಿಂದ ಮಂಜೂರು ಆಗಿದ್ದು. ಒಟು ್ಟ1927 ಠೇವಣಿದಾರರಿಗೆ 1309.00 ಲಕ್ಷ ಠೇವಣಿ ಹಣವನ್ನು ಈಗಾಗಲೆ ಪಾವತಿಸಲಾಗಿದೆ. ದಿ ಡೆಕ್ಕನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ವಿಜಯಪುರ ಸದರಿ ಸದಸ್ಯರ ಠೇವಣಿ ಮೊತ್ತ ಮುರುಪಾವತಿ ಆಗಿರುವದಿಲ್ಲ. ಕಾರಣ ಎ.ಪಿ.ಎಂ.ಸಿ ಪೋಲೀಸ ಠಾಣೆ ವಿಜಯಪುರ ಇವರಲ್ಲಿ ಗುನ್ನೆ ನಂ.90/2018 ದಿ:06-12-2018ರಲ್ಲಿ ದೂರ ದಾಖಲಾಗಿರುತ್ತದೆ. ಕಾರಣ ಸದರಿ ಪ್ರಕರಣವು 1ನೇ ಹೆಚ್ಚುವರಿ ಸಿಜೆಎಮ್ ನ್ಯಾಯಾಲಯ ವಿಜಯಪುರದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ ಹಾಗೂ ಬ್ಯಾಂಕ್ ವ್ಯವಸ್ಥಾಪಕರು ಮತ್ತು ಕ್ಯಾಶಿಯರ್ರವರ ಸ್ಥಿರಾಸ್ತಿ ಮೇಲೆ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಕಲಂ 103 ಬ್ಯಾಂಕಿನ ಬೋಜಾ ದಾಖಲ್ ಮಾಡಲಾಗಿದೆ. ಈ ಪ್ರಕರಣದಲ್ಲಿ ಹಣ ವಸೂಲಿಗಾಗಿ ಮಾನ್ಯ ಜಂಟಿ ನಿಬಂಧಕರು ಸಹಕಾರ ಸಂಘಗಳು ನಿ, (441) ಪಟ್ಟಣ ಸಹಕಾರಿ ಸಂಘಗಳು ವಿಭಾಗ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 70 ರ ಮೇರೆಗೆ ವಿಚಾರಣೆ ಹಂತದಲ್ಲಿರುವಾಗ ಪ್ರತಿವಾದಿಯವರು ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರಿನಲ್ಲಿ ಅಪೀಲು ನಂ.4/2012 ದಾಖಲಿಸಿದ್ದಾರೆ. ಮುಂದುವರೆದು ಈಗಾಗಲೇ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾವಿ ಪ್ರಾಂತ ಬೆಳಗಾವಿ ಇವರು ಸದರಿ ಬ್ಯಾಂಕಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಿಜಯಪುರ ಉಪವಿಭಾಗ ವಿಜಯಪುರ ಇವರನ್ನು ಸಪಾಪನಾಧಿಕಾರಿ ಅಂತಾ ನೇಮಕ ಮಾಡಿರುತ್ತಾರೆ. ಸದರಿ ಬ್ಯಾಂಕಿನ ಸಮಾಪನಾಧಿಕಾರಿಗಳು ಸದರಿ ಸಮಾಪನಾಧಿಕಾರಿಗಳ ಪ್ರಭಾರ ಪಡೆದಿರುತ್ತಾರೆ. |
| 9 | ವಿಜಯಪುರ | ನವಜೀವನ ಪತ್ತಿನ ಸಹಕಾರ ಸಂಘ ನಿ., ವಿಜಯಪುರ | 123 | 139.67 | ಒಟ್ಟು 153 ಠೇವಣಿದಾರರು ಇವರು ಹೊಂದಿರುವ ಒಟ್ಟು ಠೇವಣಿ ಮೊತ್ತ 166.19 ಲಕ್ಷಗಳ ಪೈಕಿ 30 ಠೇವಣಿದಾರರಿಗ ಒಟ್ಟು 26.52 ಲಕ್ಷ ಠೇವಣಿ ಮೊತ್ತ ಮರುಪಾವತಿಸಲಾಗಿದೆ. ಇನ್ನು 123 ಠೇವಣಿದಾರರಿಗೆ ಠೇವಣಿ ಮೊತ್ತ 139.67 ಮುರುಪಾವತಿಸಲು ಬಾಕಿ ಇರುತ್ತದೆ. ಸದರಿ ದುರುಪಯೋಗದ ಮೊತ್ತದ ವಸೂಲಿಗಾಗಿ ಕಲಂ.69 ರ ಆಧಿಬಾರ ಪ್ರಕರಣ ಸಹಾಯಕ ನಿಬಂಧಕರ ಕಛೇರಿಯಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಈ ಪ್ರಕರಣದಲ್ಲಿ ಎದುರುದಾರರಿಗೆ ಆರೋಪ ಪಟ್ಟಿ ಜಾರಿ ಮಾಡಲಾಗಿದೆ. ಮುಂದುವರೆದು ವಿಜಯಪುರ ನಗರದ ಗಾಂಧಿ ಚೌಕ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ನಂ.303/2018 ನ್ನು ದಿ:17/12/2018 ರಂದು ದಾಖಲಿಸಲಾಗಿದೆ. |
| 10 | | ಈಶ್ವರ ಪತ್ತಿನ ಸಹಕಾರಿ ಸಂಘ ನಿ., ವಿಜಯಪುರ | 3573 | 2410.78 | ಸಹಕಾರಿ ಸಂಘಗಳು(ಪಟ್ಟಣ ಬ್ಯಾಂಕುಗಳ ವಿಭಾಗ) ಬೆಂಗಳೂರ ಇವರ ಆದೇಶ ನಂ./ಯುಸಿಬಿ/1/ಕಲಂ-54/07/2017- ಗಾಂಧಿ ಚೌಕ ಪೋಲಿಸ ಠಾಣೆ ವಿಜಯಪುರ ಇವರಲ್ಲಿ ಗುನ್ನೆ ನಂ.23/2017 ದಿ:11-08-2017 ರಲ್ಲಿ ದಾಖಲಾಗಿರುತ್ತದೆ ಮಾನ್ಯ ಜಂಟಿ ನಿಬಂಧಕರು ಸಹಕಾರಿ ಸಂಘಗಳು(ಪಟ್ಟಣ ಬ್ಯಾಂಕುಗಳ ವಿಭಾಗ) ಬೆಂಗಳೂರ ಇವರ ಆದೇಶ ನಂ./ಯುಸಿಬಿ/1/ಕಲಂ-64/07/2017-18 ಮೇರೆಗೆ ವಿಚಾರಣೆ ಪೂರ್ತಿಗೊಳಿಸಿ ವರದಿ ಸಲ್ಲಿಸಿರುತ್ತಾರೆ ಈ ಕುರಿತು ವರದಿ ಆಧಾರದ ಮೇಲೆ ಸಹಕಾರ ಸಂಘಗಳ ಕಾಯ್ದೆ 1959 ಕಲಂ 68ರ ಮೇರೆಗೆ ಆದೇಶ ಮಾಡಿರುತ್ತಾರೆಂದು ಸಹಕಾರ ಸಂಘಗಳ ಉಪ ನಿಬಂಧಕರು ವಿಜಯಪುರ ಇವರು ವರದಿ ಸಲ್ಲಿಸಿದ್ದಾರೆ ಅದರಂತೆ ಮುಂದುವರೆದು ಸಿ.ಓ.ಡಿ. ಅವರು ತನಿಖೆ ಪೂರ್ತಿಗೊಳಿಸಿ ಜೆ.ಎಂ.ಎಫ್.ಸಿ. ವಿಜಯಪುರ ನ್ಯಾಯಾಲಯಕ್ಕೆ ಸಿ.ಸಿ.ನಂ:2316/19, 2317/19ರ ಕೆಳಗೆ ಆಪಾದನೆ ಪಟ್ಟಿ ಸಲ್ಲಿಸಿರುತ್ತಾರೆ.<br><br>ಈ ಸಂಘದ ಆಡಳಿತ ಸಮಿತಿ ಮತ್ತು ಕಾರ್ಯದರ್ಶಿಯವರ ಮೇಲೆ ಅಧಿಬಾರ ಅರ್ಜಿ ಸಹಕಾರಿ ಸಂಘಗಳ ಕಾಯ್ದೆ 1959 ಕಲಂ 69ರನ್ವಯ ಮಾನ್ಯ ಜಂಟಿ ನಿಬಂಧಕರು ಸಹಕಾರಿ ಸಂಘಗಳು (ಪಟ್ಟಣ ಬ್ಯಾಂಕುಗಳ ವಿಭಾಗ) ಬೆಂಗಳೂರು ಇವರ ನ್ಯಾಯಾಲಯದಲ್ಲಿ ವಿಚಾರಣೆ ಜಾರಿಯಲ್ಲಿರುತ್ತದೆ. ಅದರಂತೆ ತಪ್ಪಿತಸ್ಥರ ಸ್ಥಿರಾಸ್ತಿಯ ಮೇಲೆ ಸಹಕಾರಿ ಸಂಘಗಳ ಕಾಯ್ದೆ 1959 ಕಲಂ 103ರ ಪ್ರಕಾರ ಆದೇಶ ಪೂರ್ವ ಜಪ್ತಿ ಮಾಡಿ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. |
| 11 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ ಪಿಕಾರ್ಡ್ ಬ್ಯಾಂಕ್ ನಿ. | 171 | 20.44 | ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರ ನ್ಯಾಯಾಲಯದಲ್ಲಿ ಹೂಡಲಾಗಿದೆ |
| 12 | ಹಾವೇರಿ | ಹಾವೇರಿ ಪಿಕಾರ್ಡ್ ಬ್ಯಾಂಕ್ ನಿ. | 18 | 3.69 | ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಅಲ್ಲದೇ ಕರ್ನಾಟಕ ಸಹಕಾರ ಸಂಘಗಳ ಧನಿಯಮ 1959ರ ಕಲಂ 103 ರಂತೆ ಆದೇಶವಾಗಿ ತಹಶೀಲ್ದಾರವರ ಹಗೂ ಕಂದಾಯ ಇಲಾಖೆಗೆ ಸಲ್ಲಿಸಲಾಗಿದ್ದು ಆಸ್ತಿಗಳ ಮೇಲೆ ದಾಖಲು ಬಾಕಿ ಇರುತ್ತದೆ. |

ಸಹಕಾರ ಸಂಘಗಳ ನಿಬಂಧಕರು

ಕರ್ನಾಟಕ ರಾಜ್ಯ,ಬೆಂಗಳೂರು